

بِسۡمِ اللّٰهِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್,** ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 27-07-2018 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ದಿನ ನಾನು ಇಬ್ಬರು ಸಹಾಬರ ಬಗ್ಗೆ ವಿವರಿಸುವೆನು. ಮೊದಲನೆಯ ಸಹಾಬಿ ಹಝ್ರತ್ ಮುನ್‌ಝಿರ್ ಬಿನ್ ಮುಹಮ್ಮದ್ ಅನ್‌ಸಾರಿ(ರ). ಅವರು ಬನೂ ಜಹ್‌ಜಬಾ ಗೋತ್ರಕ್ಕೆ ಸೇರಿದವರಾಗಿದ್ದರು. ಮದೀನಕ್ಕೆ ಹಿಜ್‌ರತ್ ಮಾಡಿದ ನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಮುನ್‌ಝಿರ್ ಬಿನ್ ಮುಹಮ್ಮದ್ ಮತ್ತು ತುಫೈಲ್ ಬಿನ್ ಹಾರಿಸ್ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದ್ದರು. ಹಝ್ರತ್ ಝುಬೈರ್ ಬಿನ್ ಅವ್ವಾಮ್ ಹಝ್ರತ್ ಹಾತಿಬ್ ಬಿನ್ ಅಬೀ ಬಲ್‌ತಅ ಮತ್ತು ಹಝ್ರತ್ ಅಬೂ ಸೀರತ್ ಬಿನ್ ಅಬೀ ರುಹ್‌ಮ್ ಮಕ್ಕದಿಂದ ಮದೀನಕ್ಕೆ ಹಿಜ್‌ರತ್ ಮಾಡಿದಾಗ ಅವರು ಮೂವರೂ ಹಝ್ರತ್ ಮುನ್‌ಝಿರ್ ಬಿನ್ ಮುಹಮ್ಮದರ ಮನೆಯಲ್ಲಿ ವಾಸಿಸಿದರು. ಹಝ್ರತ್ ಮುನ್‌ಝಿರ್ ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಬಿಅ್‌ರ್‌ಮಊನ ಘಟನೆಯಲ್ಲಿ ಶಹೀದರಾದರು. ಬಿಅ್‌ರ್‌ಮಊನ ಘಟನೆ ಹೀಗಿದೆ: ಹಿಜರಿ 4ನೇ ವರ್ಷ ಸಫರ್ ತಿಂಗಳಲ್ಲಿ ಮುನ್‌ಝಿರ್ ಬಿನ್ ಅಮರ್ ಅನ್‌ಸಾರಿಯ ನೇತೃತ್ವದಲ್ಲಿ ಸಹಾಬರ ಒಂದು ಗುಂಪನ್ನು ಇಸ್ಲಾಮೀ ತತ್ವಗಳನ್ನು ಜನರಿಗೆ ತಿಳಿಸಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕಳುಹಿಸಿದರು. ಅವರ ಸಂಖ್ಯೆ ಎಪ್ಪತ್ತು ಮತ್ತು ಅವರಲ್ಲಿ ಬಹುತೇಕ ಜನರು ಅನ್‌ಸಾರ್‌ಗಳಾಗಿದ್ದರು. ಅವರೆಲ್ಲ ಖಾರಿಗಳು, ಎಂದರೆ ಪವಿತ್ರ ಖುರ್‌ಆನ್ ಸುಶ್ರಾವ್ಯವಾಗಿ ಪಠಿಸುವವರಾಗಿದ್ದರು.

ಒಂದು ಬಾವಿಯ ಹೆಸರಿನಿಂದ ಪ್ರಸಿದ್ಧವಾದ ಬಿಅ್‌ರ್‌ಮಊನ ಎಂಬಲ್ಲಿಗೆ ಅವರು ತಲಪಿದಾಗ ಸಹಾಬರಲ್ಲಿ ಒಬ್ಬರಾದ ಹರಾಮ್ ಬಿನ್ ಮಲ್‌ಹಾನ್ – ಅವರು ಅನಸ್ ಬಿನ್ ಮಾಲಿಕರ ಸೋದರ ಮಾವ ಆಗಿದ್ದರು – ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಇಸ್ಲಾಮಿಗೆ ಕರೆಯುವ ಸಂದೇಶವನ್ನು ತಲಪಿಸಲು ಆಮಿರ್ ಗೋತ್ರದ ಮುಖಂಡ ಮತ್ತು ಅಬೂ ಬರಾ ಆಮಿರನ ಸಹೋದರ ಪುತ್ರನಾದ ಆಮಿರ್ ಬಿನ್ ತುಫೈಲನ ಸಮೀಪಕ್ಕೆ ಹೋದರು. ಉಳಿದ ಸಹಾಬ ಹಿಂದೆ ಉಳಿದರು. ಹರಾಮ್ ಬಿನ್ ಮಲ್‌ಹಾನ್‌ರವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದೂತನಾಗಿ ಆಮಿರ್ ಬಿನ್ ತುಫೈಲ್ ಮತ್ತು ಅವನ ಸಂಗಡಿಗರ ಸಮೀಪಕ್ಕೆ ಹೋದಾಗ ಆರಂಭದಲ್ಲಿ ಆಮಿರನು ಕಾಪಟ್ಯದಿಂದ ಸಂತೋಷ ಪ್ರಕಟಿಸಿ ಸ್ವಾಗತಿಸಿದನು. ಹರಾಮ್ ಬಿನ್ ಮಲ್‌ಹಾನ್ ಸಮಾಧಾನದಿಂದ ಕುಳಿತುಕೊಂಡು ಇಸ್ಲಾಮಿನ ತಬ್ಲೀಗ್ ಪ್ರಾರಂಭಿಸಿದಾಗ ಅಲ್ಲಿದ್ದ ಕೆಲವು ದುಷ್ಕರ್ಮಿಗಳು ಒಬ್ಬನಿಗೆ ಸಂಜ್ಞೆ ಮಾಡಿದಾಗ ಅವನು ಹಿಂದಿನಿಂದ ಈಟಿಯಿಂದ ತಿವಿದು ಆ ನಿಷ್ಕಳಂಕ ಸಹಾಬಿಯನ್ನು ಶಹೀದರನ್ನಾಗಿ ಮಾಡಿದನು. ಆಗ ಶಹೀದರು ಮೃತರಾಗುವ ಮೊದಲು ಹೀಗೆ ಉಚ್ಚರಿಸಿದರು, **ಅಲ್ಲಾಹು ಅಕ್‌ಬರ್ ಫುಝ್‌ತು ವ ರಬ್ಬಿಲ್ ಕಅಬ.** ಅಲ್ಲಾಹು ಅಕ್‌ಬರ್ ಕಅಬದ ಪ್ರಭುವಿನಾಣೆ ನಾನು ಜಯಶಾಲಿಯಾದೆನು. ನನ್ನ ಉದ್ದೇಶಲಕ್ಷ್ಯ ಗಳಿಸಿದೆನು.

ಆಮಿರ್ ಬಿನ್ ತುಫೈಲ್ ತನ್ನ ದುಷ್ಕೃತ್ಯವನ್ನು ಅಲ್ಲಿಗೆ ಮುಕ್ತಾಯಗೊಳಿಸಲಿಲ್ಲ. ಅವನು ಬನೂ ಸಲೀಮ್ ಗೋತ್ರದ ಬನೂ ರೀಲ್ ಮತ್ತು ಝುಕ್‌ವಾನ್ ಮೊದಲಾದ ಜನರನ್ನು ಕರೆದುಕೊಂಡು ನಿರಾಯುಧರಾದ ಉಳಿದ ಸಹಾಬರ ಮೇಲೆ ಆಕ್ರಮಣ ಮಾಡಿ ಖಡ್ಗದಿಂದ ಅವರನ್ನು ಸಂಹರಿಸಿದನು. ಕೇವಲ ಒಬ್ಬ ಸಹಾಬಿ ಕಅಬ್ ಬಿನ್ ಝೈದ್ ಹತರಾಗದೆ ಬಾಕಿಯಾದರು. ಸಹಾಬರ ಗುಂಪಿನಿಂದ ಇಬ್ಬರು ಎಂದರೆ ಅಮರ್ ಬಿನ್ ಉಮಯ್ಯ ಝಮ್‌ರಿ ಮತ್ತು ಮುನ್‌ಝಿರ್ ಬಿನ್ ಮುಹಮ್ಮದ್ ಒಂಟೆಗಳನ್ನು ಮೇಯಿಸಲು ತಮ್ಮ ಗುಂಪಿನಿಂದ ದೂರವಾಗಿ ಅತ್ತಿತ್ತ ಹೋಗಿದ್ದರು. ಅವರು ಮರಳಿ ಬಂದಾಗ ಅಲ್ಲಿನ ದೃಶ್ಯಕಂಡು ಹೇಳಿದರು, ನಮ್ಮ ಅಮೀರ್ ಮುನ್‌ಝಿರ್ ಬಿನ್ ಅಮರ್ ಶಹೀದರಾದಲ್ಲಿಯೇ ನಾವು ಸಹ ಹೋರಾಡುವೆವು. ಆ ರೀತಿ ಮುನ್‌ಝಿರ್ ಬಿನ್ ಮುಹಮ್ಮದ್ ಮತ್ತು ಅವರ ಜೊತೆಗಾರ ಶತ್ರುಗಳ ವಿರುದ್ಧ ಹೋರಾಡುತ್ತಾ ಶಹೀದರಾದರು.

ನಾನು ವಿವರಿಸಲಿರುವ ಎರಡನೆಯ ಸಹಾಬಿ ಹಝ್ರತ್ ಹಾತಿಬ್ ಬಿನ್ ಅಬೀ ಬಲ್‌ತಅ. ಅವರು ಲಖ್‌ಮ್ ಗೋತ್ರಕ್ಕೆ ಸೇರಿದವರು. ಅವರು ಬನೂ ಅಸದ್ ಗೋತ್ರದೊಂದಿಗೆ ಪ್ರತಿಜ್ಞಾಬದ್ಧ ಸಂಬಂಧ ಹೊಂದಿದ್ದರು. ಅವರ ಉಪನಾಮ ಅಬೂ ಅಬ್ದುಲ್ಲಾ ಎಂದಾಗಿತ್ತು. ಹಝ್ರತ್ ಹಾತಿಬ್ ಯಮನ್ ದೇಶದವರಾಗಿದ್ದರು. ಅವರು ಮತ್ತು ಅವರ ಗುಲಾಮನಾದ ಸಅದ್ ಮಕ್ಕದಿಂದ ಮದೀನಕ್ಕೆ ಹಿಜ್‌ರತ್ ಮಾಡಿದಾಗ ಅವರಿಬ್ಬರೂ ಹಝ್ರತ್ ಮುನ್‌ಝಿರ್ ಬಿನ್ ಮುಹಮ್ಮದ್ ಬಿನ್ ಉಖ್‌ಬಾರವರ ಮನೆಯಲ್ಲಿ ವಾಸಿಸಿದರು. ಹಝ್ರತ್ ಹಾತಿಬ್‌ರವರು ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ತಬ್ಲೀಗಿ ಪತ್ರವನ್ನು ಅಲೆಕ್ಸಾಂಡ್ರಿಯದ ದೊರೆ ಮುಖೌಖಿಸ್‌ನಿಗೆ ಹಝ್ರತ್ ಹಾತಿಬ್ ಕೈಯಲ್ಲಿ ಕಳುಹಿಸಿದ್ದರು. ಹಝ್ರತ್ ಹಾತಿಬ್ ಅತ್ಯುತ್ತಮವಾಗಿ ಬಾಣ ಹೂಡುವವರಾಗಿದ್ದರು. ಅವರು ಮುಸ್ಲಿಮರಾಗುವ ಮೊದಲು ಮಕ್ಕದ ಖುರೈಶಿಗಳ ಅತ್ಯುತ್ತಮ ಕುದುರೆ ಸವಾರರಲ್ಲಿ ಒಬ್ಬರೂ ಮತ್ತು ಕವಿಯೂ ಆಗಿದ್ದರು. ಕೆಲವರ ಅಭಿಪ್ರಾಯ ಪ್ರಕಾರ ಹಝ್ರತ್ ಹಾತಿಬ್ ಬಿನ್

ಅಬೀ ಬಲ್‌ತಅರವರು ಉಬೈದುಲ್ಲಾ ಬಿನ್ ಹಮೀದರ ಗುಲಾಮರಾಗಿದ್ದರು. ಅವರು ತನ್ನ ಯಜಮಾನನಿಂದ ವಿಮೋಚನೆಯ ಪತ್ರ ಪಡೆದು ಸ್ವತಂತ್ರರಾಗಿದ್ದರು. ಅವರು ವಿಮೋಚನೆಯ ಹಣ ಮಕ್ಕದ ವಿಜಯದ ದಿನ ಪಾವತಿಸಿದರು. ಹಝ್ರತ್ ಉಮ್ಮು ಸಲ್ಮ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನ ಬಳಿಗೆ ವಿವಾಹದ ಸಂದೇಶವನ್ನು ಹಾತಿಬ್ ಮುಖಾಂತರ ಕಳುಹಿಸಿದ್ದರು. ಒಂದು ವರದಿ ಹೀಗಿದೆ: ಹಝ್ರತ್ ಅನಸ್ ಬಿನ್ ಮಾಲಿಕ್‌ರೊಂದಿಗೆ ಹಾತಿಬ್ ಬಿನ್ ಅಬೀ ಬಲ್‌ತಅ ಹೇಳಿದರು: ಉಹುದ್ ಯುದ್ಧದ ದಿನದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ರಕ್ತದಿಂದ ಕೊಳೆಯಾದ ತಮ್ಮ ಮುಖವನ್ನು ತೊಳೆಯುತ್ತಿದ್ದರು. ಹಾತಿಬ್ ಕೇಳಿದರು: ನಿಮಗೆ ಯಾರಿಂದ ಹೀಗಾಯಿತು? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಉತ್‌ಬ ಬಿನ್ ಅಬೀ ವಖಾಸ್ ನನ್ನ ಮುಖಕ್ಕೆ ಕಲ್ಲೆಸೆದನು. ಹಝ್ರತ್ ಹಾತಿಬ್ ಹೇಳುತ್ತಾರೆ: ನಾನು ಬೆಟ್ಟದ ಮೇಲ್ಭಾಗದಿಂದ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೊಲ್ಲಲ್ಪಟ್ಟರು ಎಂಬ ಶಬ್ದ ಕೇಳಿದೆ. ಆ ಶಬ್ದ ಕೇಳಿ ನಾನು ಎಂತಹ ಸ್ಥಿತಿಯಲ್ಲಿ ಇಲ್ಲಿಗೆ ಬಂದೆನೆಂದರೆ ನನ್ನ ಶರೀರದಲ್ಲಿ ಜೀವವಿಲ್ಲವೋ ಎಂಬಂತೆ. ಹಝ್ರತ್ ಹಾತಿಬ್, ಉತ್‌ಬನ ಸಮೀಪ ಹೋದರು. ಅವನು ಅಡಗಿಕೊಂಡಿದ್ದನು. ಹಝ್ರತ್ ಹಾತಿಬ್ ಅವನನ್ನು ಸ್ವಾಧೀನಪಡಿಸಿಕೊಳ್ಳಲು ಶಕ್ತರಾದರು. ಅವರು ಖಡ್ಗದಿಂದ ಅವನ ತಲೆ ಕಡಿದರು. ಅನಂತರ ಹಾತಿಬ್ ಅವನ ತಲೆ, ಅವನ ಸಾಮಗ್ರಿಗಳನ್ನು ಮತ್ತು ಕುದುರೆಯನ್ನು ಹಿಡಿದುಕೊಂಡು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಬಂದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಾತಿಬರಿಗೋಸ್ಕರ ಪ್ರಾರ್ಥಿಸಿದರು. ಅಲ್ಲಾಹನು ನಿನ್ನಿಂದ ಸಂಪ್ರೀತನಾಗಲಿ. ಅಲ್ಲಾಹನು ನಿನ್ನಿಂದ ಸಂಪ್ರೀತನಾಗಲಿ ಎಂದು ಎರಡು ಸಲ ಹೇಳಿದರು.

ಹಝ್ರತ್ ಹಾತಿಬ್ ಹಿಜರಿ ವರ್ಷ 30ರಲ್ಲಿ ಮದೀನದಲ್ಲಿ 65ನೇ ವರ್ಷ ಪ್ರಾಯದಲ್ಲಿ ನಿಧನ ಹೊಂದಿದರು. ಹಝ್ರತ್ ಉಸ್ಮಾನ್ ಅವರ ಜನಾಝ ನಮಾಝ್ ನಿರ್ವಹಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹಝ್ರತ್ ಹಾತಿಬರ ಕೈಯ್ಯಲ್ಲಿ ಒಂದು ಪತ್ರ ಮುಖೌಖಿಸ್‌ನಿಗೆ ಕಳುಹಿಸಿದ್ದರು. ಅವನು ಬೈಝಾಂಟೈನ್ ದೊರೆ ಖೈಸರನ ಅಧೀನದಲ್ಲಿ ಈಜಿಪ್ಟ್ ಮತ್ತು ಅಲೆಕ್ಸಾಂಡ್ರಿಯದ ದೊರೆಯಾಗಿದ್ದನು. ಅವನು ಖೈಸರನ ಹಾಗೆ ಕ್ರೈಸ್ತ ಧರ್ಮಾವಲಂಬಿಯಾಗಿದ್ದನು. ಅವನ ವೈಯ್ಯಕ್ತಿಕ ಹೆಸರು ಜರೀಜ್ ಬಿನ್ ಮೀನಾ ಎಂದಾಗಿತ್ತು. ಅವನು ಮತ್ತು ಅವನ ಪ್ರಜೆಗಳು ಖಿಬ್ತಿ ಕೋಮಿನವರಾಗಿದ್ದರು. ಪತ್ರದಲ್ಲಿ ಹೀಗೆ ಬರೆಯಲಾಗಿತ್ತು: ಕಾರುಣ್ಯವಂತನೂ ಪದೇ ಪದೇ ದಯೆದೋರುವವನೂ ಕರ್ಮಗಳಿಗೆ ಅತ್ಯುತ್ತಮ ಪ್ರತಿಫಲ ನೀಡುವವನೂ ಆಗಿರುವ ಅಲ್ಲಾಹನ ನಾಮದಿಂದ ಪ್ರಾರಂಭಿಸುತ್ತೇನೆ. ಈ ಪತ್ರ ಅಲ್ಲಾಹನ ದಾಸನೂ ಅವನ ಸಂದೇಶವಾಹಕನೂ ಆಗಿರುವ ಮುಹಮ್ಮದನಿಂದ ಖಿಬ್ತಿಗಳ ಮುಂಖಡ ಮುಖೌಖಿಸ್‌ನಿಗೆ. ಮಾರ್ಗದರ್ಶನವನ್ನು ಅಂಗೀಕರಿಸುವವನ ಮೇಲೆ ಅಲ್ಲಾಹನ ಶಾಂತಿ ಇರಲಿ. ಈಜಿಪ್ಟ್ ದೊರೆಯಾದ ನಿಮ್ಮನ್ನು ಇಸ್ಲಾಮಿಗೆ ಆಮಂತ್ರಿಸುತ್ತೇನೆ. ನೀವು ಮುಸ್ಲಿಮರಾಗಿ ಅಲ್ಲಾಹನಿಂದ ಶಾಂತಿ ಗಳಿಸಿರಿ. ಇದುವೇ ಈಗ ಮೋಕ್ಷದ ಮಾರ್ಗವಾಗಿದೆ. ಅಲ್ಲಾಹನು ನಿಮಗೆ ಇಮ್ಮಡಿ ಪ್ರತಿಫಲ ನೀಡುವನು. ಆದರೆ ನೀವು ಮುಖ ತಿರುಗಿಸಿದರೆ ನಿಮ್ಮ ಮತ್ತು ಖಿಬ್ತಿ ಸಮುದಾಯದ ಪಾಪಭಾರ ನಿಮ್ಮ ಕೊರಳಿಗೆ ಬೀಳುವುದು. ಓ ಗ್ರಂಥದ ಜನರೇ, ನಮ್ಮ ಮತ್ತು ನಿಮ್ಮ ಮಧ್ಯೆ ಸಮವಾಗಿರುವ ವಿಷಯಗಳ ಕಡೆಗೆ ಬನ್ನಿರಿ. ಎಂದರೆ ನಾವು ದೇವನ ಹೊರತು ಬೇರೆ ಯಾರನ್ನೂ ಆರಾಧಿಸಬಾರದು. ದೇವನಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡಬಾರದು. ದೇವನ ಹೊರತು ನಮ್ಮವರಲ್ಲಿ ಯಾರನ್ನಾದರೂ ನಮ್ಮ ಇಚ್ಛೆಗಳನ್ನು ಈಡೇರಿಸುವವರನ್ನಾಗಿ ಮಾಡಬಾರದು. ಅವರು ವಿಮುಖವಾದರೆ ಅವರೊಂದಿಗೆ ಹೇಳು, ನೀವು ಸಾಕ್ಷಿವಹಿಸಿರಿ, ನಾವು ಏಕದೇವನನ್ನು ಅನುಸರಿಸುವವರಾಗಿದ್ದೇವೆ.

ಮುಖೌಖಿಸ್ ಪತ್ರ ಓದಿ ಹಝ್ರತ್ ಹಾತಿಬ್‌ರನ್ನು ಸಂಬೋಧಿಸಿ ಸ್ವಲ್ಪ ಮಟ್ಟಿಗೆ ವ್ಯಂಗ್ಯವಾಗಿ ಹೇಳಿದನು: ನಿಮ್ಮ ಈ ಮಹಾನುಭಾವರು ವಾಸ್ತವಿಕವಾಗಿ ಅಲ್ಲಾಹನ ಪ್ರವಾದಿಯಾಗಿದ್ದರೆ ನನಗೆ ಪತ್ರ ಬರೆಯುವುದಕ್ಕೆ ಬದಲಾಗಿ ಅಲ್ಲಾಹನೊಂದಿಗೆ ಏಕೆ ಪ್ರಾರ್ಥಿಸಲಿಲ್ಲ- ಅವರನ್ನು ನನ್ನ ಮೇಲೆ ಅಧಿಕಾರ ಹೊಂದುವಂತೆ ಮಾಡಲಿ ಎಂದು. ಹಾತಿಬ್ ಹೇಳಿದರು: ನಿಮ್ಮ ಈ ಆಕ್ಷೇಪ ಸರಿಯಾದುದಾಗಿದ್ದರೆ, ಅದು ಈಸಾ ಮಸೀಹರ ಮೇಲೆಯೂ ಮಾಡಬಹುದಾಗಿದೆ. ಅವರು ತನ್ನ ವಿರೋಧಿಗಳ ವಿರುದ್ಧ ಅಂತಹ ಪ್ರಾರ್ಥನೆ ಏಕೆ ಮಾಡಲಿಲ್ಲ ಎಂದು. ಅನಂತರ ಹಝ್ರತ್ ಹಾತಿಬ್ ಹೇಳಿದರು: ನೀವು ಸಮಾಧಾನದಿಂದ ಚಿಂತಿಸಿರಿ. ಏಕೆಂದರೆ ತಮಗಿಂತ ಮೊದಲು ಇದೇ ದೇಶದಲ್ಲಿ ಒಬ್ಬ ದೊರೆ ಫಿರ್‌ಔನ್ ಇದ್ದನು. ಅವನು ತಾನು ಸಕಲ ಲೋಕಗಳ ಪ್ರಭು ಎಂದೂ ಸರ್ವೋನ್ನತ ಅಧಿಕಾರಿ ಎಂದೂ ಘೋಷಿಸಿದ್ದನು. ಅಲ್ಲಾಹನು ಅವನನ್ನು ಹೇಗೆ ಹಿಡಿಗೂಡಿದನೆಂದರೆ ಹಿಂದಿನವರಿಗೂ ಮುಂದಿನವರಿಗೂ ಅವನು ನೀತಿಪಾಠದಾಯಕನಾದನು. ನಾನು ತಮ್ಮೊಂದಿಗೆ ಪ್ರಾಮಾಣಿಕವಾಗಿ ಅಪೇಕ್ಷಿಸುತ್ತೇನೆ. ನೀವು ಹಿಂದಿನವರ ಸ್ಥಿತಿಯಿಂದ ಪಾಠ ಕಲಿಯಿರಿ. ಅನ್ಯರು ನಿಮ್ಮಿಂದ ನೀತಿಪಾಠ ಕಲಿಯದಂತಾಗಲಿ. ಹಝ್ರತ್ ಹಾತಿಬ್ ಬಹಳ ಧೈರ್ಯದಿಂದ ಮಾತನಾಡುವುದು ಕಂಡಾಗ ಮುಖೌಖಿಸ್ ಹೇಳಿದನು: ನಾವು ಮೊದಲೇ ಒಂದು ಧರ್ಮದ ಅನುಯಾಯಿಗಳಾಗಿದ್ದೇವೆ. ನಮಗೆ ಅದಕ್ಕಿಂತ ಉತ್ತಮವಾದ ಧರ್ಮ ಲಭಿಸುವ ತನಕ ಆ ಧರ್ಮವನ್ನು ಬಿಡಲಾರೆವು. ಎಂದರೆ ಕ್ರೈಸ್ತ ಧರ್ಮ ಬಿಡಲಾರೆವು. ಹಝ್ರತ್ ಹಾತಿಬ್ ರಝಿಯಲ್ಲಾಹು ಅನ್‌ಹು ಹೇಳಿದರು: ಇಸ್ಲಾಮ್ ಎಂತಹ ಧರ್ಮವೆಂದರೆ ಆ ಧರ್ಮವಿರುವಾಗ ಅನ್ಯಧರ್ಮಗಳ ಆವಶ್ಯಕತೆ ಇರುವುದಿಲ್ಲ. ಈ ಧರ್ಮ ಎಲ್ಲಾ ಪ್ರವಾದಿಗಳನ್ನು ನಂಬಲು ಉಪದೇಶಿಸುತ್ತಿದೆ. ಯಾವ ರೀತಿ ಹಝ್ರತ್ ಮೂಸಾ ಹಝ್ರತ್ ಈಸಾ ಬಗ್ಗೆ ಶುಭವಾರ್ತೆ ನೀಡಿದ್ದರೋ ಅದೇ ರೀತಿ ಹಝ್ರತ್ ಈಸಾ ನಮ್ಮ ಪ್ರವಾದಿ ಬಗ್ಗೆ ಶುಭವಾರ್ತೆ ನೀಡಿದ್ದಾರೆ. ಆಗ ಮುಖೌಖಿಸ್ ಮೌನವಾಗಿ

ಆಲೋಚಿಸಲು ತೊಡಗಿದನು. ಆದರೆ ಅನಂತರ ಇನ್ನೊಂದು ಸಂದರ್ಭದಲ್ಲಿ ಆಸ್ಥಾನದಲ್ಲಿ ದೊಡ್ಡ ದೊಡ್ಡ ಪಾದರಿಗಳ ಸಮ್ಮುಖದಲ್ಲಿ ಮುಖೌಖಿಸ್ ಹಾತಿಬ್‌ರೊಂದಿಗೆ ಹೇಳಿದನು: ನಿಮ್ಮ ಪ್ರವಾದಿಯನ್ನು ತನ್ನ ಊರಿನಿಂದ ಹೊರಗೆ ಹಾಕಲಾಗಿತ್ತು ಎಂದು ತಿಳಿದಿದ್ದೇನೆ. ನಿಮ್ಮ ಪ್ರವಾದಿ ತನ್ನನ್ನು ತನ್ನ ಊರಿನಿಂದ ಹೊರಗೆ ಹಾಕಿದವರ ವಿರುದ್ಧ ಅವರಿಗೆ ಕೆಟ್ಟದಾಗಲಿ ಎಂದು ಏಕೆ ಪ್ರಾರ್ಥಿಸಲಿಲ್ಲ? ಆಗ ಹಾತಿಬ್ ಅದಕ್ಕೆ ಪ್ರತ್ಯುತ್ತರವಾಗಿ ಹೇಳಿದರು: ನಿಮ್ಮ ಈಸಾ ಮಸೀಹರನ್ನು ಯಹೂದಿಯರು ಶಿಲುಬೆಗೇರಿಸಿ ಕೊಲ್ಲಲು ಪ್ರಯತ್ನಿಸಿದರು. ಆದರೆ ಆಗ ಸಹ ಈಸಾ ಮಸೀಹರು ಶತ್ರುಗಳ ವಿರುದ್ಧ ಪ್ರಾರ್ಥಿಸಿ ಅವರನ್ನು ನಾಶ ಮಾಡಲಿಲ್ಲ. ಮುಖೌಖಿಸ್ ಈ ಉತ್ತರವನ್ನು ಆಲಿಸಿ ಪ್ರಭಾವಿತನಾದನು. ಅವನು ಹೇಳಿದನು: ನಿಸ್ಸಂಶಯವಾಗಿಯೂ ನೀವೊಬ್ಬ ಬುದ್ಧಿಶಾಲಿಯಾಗಿದ್ದೀರಿ ಹಾಗೂ ನೀವು ಒಬ್ಬ ಬುದ್ಧಿಶಾಲಿ ಮನುಷ್ಯನ ದೂತನಾಗಿ ಬಂದಿರುವಿರಿ.

ಈ ಘಟನೆಯಿಂದ ತಿಳಿಯುವುದೇನೆಂದರೆ ಈಜಿಪ್ಟ್‌ನ ದೊರೆ ಮುಖೌಖಿಸ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದೂತರೊಂದಿಗೆ ಗೌರವಭಾವದಿಂದ ವರ್ತಿಸಿದನು. ಅವನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಾದಗಳ ಬಗ್ಗೆ ತಿಳಿಯಲು ಸ್ವಲ್ಪ ಮಟ್ಟಿಗೆ ಆಸಕ್ತಿ ಪ್ರಕಟಿಸಿದ್ದನು. ಆದರೆ ಅವನು ಇಸ್ಲಾಂ ಧರ್ಮ ಸ್ವೀಕರಿಸಲಿಲ್ಲ. ಅವನು ಕ್ರೈಸ್ತಧರ್ಮಾವಲಂಬಿಯಾಗಿಯೇ ಮೃತನಾದನೆಂದು ವರದಿಗಳು ತಿಳಿಸುತ್ತವೆ. ಮುಖೌಖಿಸ್‌ಗೆ ಬರೆದ ಪತ್ರದ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳಿದ್ದಾರೆ: ರೋಮ್ (ಬೈಝಾಂಟೈನ್) ದೊರೆಗೆ ಬರೆದ ಪತ್ರದ ಹಾಗೆಯೇ ಈ ಪತ್ರ ಬರೆಯಲಾಗಿತ್ತು. ವ್ಯತ್ಯಾಸ ಇಷ್ಟುಮಾತ್ರವಾಗಿತ್ತು. ರೊಮಿನ ದೊರೆಗೆ ಬರೆದ ಪತ್ರದಲ್ಲಿ ನೀವು ನಂಬದಿದ್ದರೆ ರೊಮಿನ ಪ್ರಜೆಗಳ ಪಾಪಭಾರ ನಿಮ್ಮ ಮೇಲೆ ಹೊರಿಸಲಾಗುವುದು ಎಂಬ ವಾಕ್ಯಕ್ಕೆ ಬದಲಾಗಿ ಈಜಿಪ್ಟನ ಖಿಬ್ತಿಗಳ ಪಾಪಭಾರ ನಿಮ್ಮ ಮೇಲೆ ಹೊರಿಸಲಾಗುವುದು ಎಂದು ಬರೆಯಲಾಗಿತ್ತು. ಹಝ್ರತ್ ಹಾತಿಬ್ ಈಜಿಪ್ಟ್ ತಲಪಿದಾಗ ಮುಖೌಖಿಸ್ ದೊರೆ ರಾಜಧಾನಿಯಲ್ಲಿರಲಿಲ್ಲ. ಅಲೆಕ್ಸಾಂಡ್ರಿಯದಲ್ಲಿದ್ದನು. ಹಝ್ರತ್ ಹಾತಿಬ್ ಅಲೆಕ್ಸಾಂಡ್ರಿಯಕ್ಕೆ ಹೋದರು. ದೊರೆ ಸಮುದ್ರದ ಕರಾವಳಿಯಲ್ಲಿ ಒಂದು ಸಭೆಯಲ್ಲಿದ್ದನು. ಸುತ್ತುಮುತ್ತಲು ಕಾವಲುಗಾರರಿದ್ದರು. ಹಝ್ರತ್ ಹಾತಿಬ್ ದೂರದಿಂದ ಪತ್ರ ಎತ್ತಿ ಹಿಡಿದು ಕರೆದು ಹೇಳತೊಡಗಿದರು, ದೊರೆ ಹಝ್ರತ್ ಹಾತಿಬ್‌ರನ್ನು ತನ್ನ ಮುಂದೆ ಕರೆತರಲು ಆಜ್ಞಾಪಿಸಿದನು. ಆ ಸಹಾಬರು ಬಹಳ ಧೈರ್ಯದಿಂದಲೂ ಜಾಣ್ಮೆಯಿಂದಲೂ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರು. ಅವರಿಗೆ ದೊರೆಗಳ ಮುಂದೆ ಅಧಿಕಾರಿಗಳ ಮುಂದೆ ಯಾವ ಭಯವೂ ಇರಲಿಲ್ಲ.

ಮಕ್ಕದ ವಿಜಯದ ಮೊದಲು ಮಕ್ಕದ ಜನರಿಗೆ ಹಝ್ರತ್ ಹಾತಿಬ್ ಒಂದು ಪತ್ರ ಬರೆದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕದ ಕಡೆಗೆ ಪ್ರಯಾಣ ಹೊರಡುವ ಬಗ್ಗೆ ತಿಳಿಸಲು ಪ್ರಯತ್ನಿಸಿದ್ದರು. ಅವರು ಅಂತಹ ಒಂದು ಪತ್ರವನ್ನು ಮಕ್ಕದ ಕಡೆಗೆ ಹೊರಟ ಒಬ್ಬ ಮಹಿಳೆಯ ಕೈಯ್ಯಲ್ಲಿ ಕೊಟ್ಟಿದ್ದರು. ಅಲ್ಲಾಹನು ಅದರ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸಿದಾಗ ಅವರು ಹಝ್ರತ್ ಅಲಿ ಮತ್ತು ಕೆಲವು ಸಹಾಬರನ್ನು ಆಕೆಯನ್ನು ಹಿಂಬಾಲಿಸಲು ಕಳುಹಿಸಿದಾಗ ಅವರು ಆ ಪತ್ರವನ್ನು ಆ ಮಹಿಳೆಯಿಂದ ತೆಗೆದುಕೊಂಡು ತಂದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಹಾತಿಬ್‌ರೊಂದಿಗೆ ಕೇಳಿದರು, ಇದೇನು? ಹಝ್ರತ್ ಹಾತಿಬ್ ಹೇಳಿದರು: ನಾನು ಕುಫ್ರ್ ಅಥವಾ ಮುನಾಫಖತ್‌ನಿಂದ ಈ ಕೆಲಸ ಮಾಡಿಲ್ಲ. ನನಗೆ ಉಪಕಾರ ಮಾಡಿದ ನನ್ನ ಸಂಬಂಧಿಕರಿಗೆ ಸಹಾಯ ಮಾಡಲು ಬರೆದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೀನು ಸತ್ಯ ಹೇಳಿದೆ ಎಂದು ಹೇಳಿ ಅವರನ್ನು ಕ್ಷಮಿಸಿದರು.

ಹಝ್ರತ್ ಅಬೂಬಕರ್‌ರವರು ಸಹ ಹಝ್ರತ್ ಹಾತಿಬ್‌ರನ್ನು ಮುಖೌಖಿಸ್ ಬಳಿಗೆ ಕಳುಹಿಸಿದ್ದರು. ಆಗ ಒಂದು ಒಪ್ಪಂದ ಮಾಡಲಾಗಿತ್ತು. ಹಝ್ರತ್ ಅಮರ್ ಬಿನ್ ಆಸ್ ಈಜಿಪ್ಟನ್ನು ಆಕ್ರಮಿಸುವ ತನಕ ಆ ಒಪ್ಪಂದ ಜಾರಿಯಲ್ಲಿತ್ತು. ಅದೊಂದು ಶಾಂತಿ ಒಪ್ಪಂದವಾಗಿತ್ತು.

ಹಝ್ರತ್ ಹಾತಿಬ್ ಸುಂದರವಾದ ಶರೀರ ಹೊಂದಿದ್ದರೆಂದು ವರದಿಗಳಿವೆ. ಅವರಿಗೆ ತೆಳು ಗಡ್ಡವಿತ್ತು. ಕೊರಳು ಬಾಗಿತ್ತು. ಬೆನ್ನು ನೇರವಾಗಿತ್ತು. ಬೆರಳುಗಳು ತೋರವಾಗಿದ್ದುವು. ಯಅ್‌ಖೂಬ್ ಬಿನ್ ಉತ್‌ಬ ವರದಿ ಮಾಡುತ್ತಾರೆ: ಹಝ್ರತ್ ಹಾತಿಬ್ ಬಿನ್ ಅಬೀ ಬಲ್‌ತಅ ಮೃತರಾಗುವಾಗ ನಾಲ್ಕು ಸಾವಿರ ದಿರ್‌ಹಮ್ ಮತ್ತು ದೀನಾರ್ ಬಿಟ್ಟುಹೋದರು. ಅವರು ಧಾನ್ಯದ ವ್ಯಾಪಾರಿ ಆಗಿದ್ದರು. ಅವರು ತಮ್ಮ ಸ್ವತ್ತು ಮದೀನದಲ್ಲಿ ಬಿಟ್ಟುಹೋದರು. ಹಝ್ರತ್ ಜಾಬಿರ್ ವರದಿ ಮಾಡುತ್ತಾರೆ: ಒಂದು ದಿವಸ ಹಝ್ರತ್ ಹಾತಿಬರ ಓರ್ವ ಗುಲಾಮ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ದೂರು ತಂದನು. ಅವನು ಹೇಳಿದನು: ಓ ಅಲ್ಲಾಹನ ಸಂದೇಶವಾಹಕರೇ, ಹಾತಿಬ್ ಖಂಡಿತವಾಗಿ ನರಕಕ್ಕೆ ಹೋಗುವನು. ಹಝ್ರತ್ ಹಾತಿಬ್ ಗುಲಾಮನಿಗೆ ದೊಡ್ಡ ಸೋಮಾರಿ ಎಂದು ಹೇಳಿರಬಹುದು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀನು ಸುಳ್ಳು ಹೇಳಿದೆ. ಹಾತಿಬ್ ಖಂಡಿತವಾಗಿ ನರಕಕ್ಕೆ ಪ್ರವೇಶಿಸಲಾರರು. ಏಕೆಂದರೆ ಅವರು ಬದರ್ ಯುದ್ಧದಲ್ಲಿಯೂ ಹುದೈಬಿಯಾ ಸಂಧಿಯಲ್ಲಿಯೂ ಭಾಗವಹಿಸಿದವರಾಗಿದ್ದಾರೆ.

ಒಮ್ಮೆ ಹಝ್ರತ್ ಹಾತಿಬ್ ಮದೀನದ ಪೇಟೆಯಲ್ಲಿ ಒಣ ದ್ರಾಕ್ಷೆಯನ್ನು ಮಾರ್ಕೆಟ್ ಧಾರಣೆಗಿಂತ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುತ್ತಿದ್ದರು. ಹಝ್ರತ್ ಉಮರ್(ರ) ಅಲ್ಲಿಂದ ದಾಟಿ ಹೋಗುವಾಗ ಅದನ್ನು ಕಂಡರು. ಆಗ ಹಝ್ರತ್ ಉಮರ್(ರ) ಆಜ್ಞಾಪಿಸಿದರು: ನೀವು ನಿಮ್ಮ ಮನೆಗೆ ಹೋಗಿ ಅಲ್ಲಿ ದ್ರಾಕ್ಷೆ ಮಾರಾಟ ಮಾಡಿರಿ. ಪೇಟೆಯಲ್ಲಿ ಇಷ್ಟು ಅಗ್ಗವಾಗಿ ಮಾರಾಟ ಮಾಡಲು ಅನುಮತಿಸಲಾರೆವು. ಇದರಿಂದ ಪೇಟೆಯ ಬೆಲೆಗಳ ಮೇಲೆ ಕೆಟ್ಟ ಪ್ರಭಾವ ಉಂಟಾಗುತ್ತದೆ ಎಂದು ಹೇಳಿದರು.

ಕರ್ಮಶಾಸ್ತ್ರ ಪಂಡಿತರು (ಫುಖಹಾ) ಹಝ್ರತ್ ಉಮರ್‌ರ ಅಭಿಪ್ರಾಯವನ್ನು ಅನುಕರಣೀಯ ಮೂಲ ತತ್ವ ಎಂದು ಅಂಗೀಕರಿಸಿದ್ದಾರೆ. ಅವರು ಹೀಗೆ ಬರೆದಿದ್ದಾರೆ: ಇಸ್ಲಾಮೀ ಸರಕಾರ ಸರಕುಗಳ ಬೆಂಬಲ ಬೆಲೆ ನಿಶ್ಚಯಿಸಬೇಕು ಎಂದು.

ಮೃಗಗಳನ್ನು ಮೇಯಿಸುವ ಹುಲ್ಲುಗಾವಲು ಮತ್ತು ಅಲ್ಲಿ ನೀರಿಗೋಸ್ಕರ ಬಾವಿತೋಡುವುದು ಇಸ್ಲಾಮೀ ಸರಕಾರ ಮಾಡಬೇಕಾದ ಕೆಲಸವಾಗಿದೆ. ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಹುಲ್ಲುಗಾವಲಿನಲ್ಲಿ ಹಝ್ರತ್ ಹಾತಿಬ್‌ರಿಂದ ಬಾವಿ ತೋಡಿಸಿದ್ದರು. ಒಂದು ವರದಿ ಹೀಗಿದೆ: ಬನೂ ಮುಸ್ತಲಿಖ್ ಯುದ್ಧದಿಂದ ಮರಳುವಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಖೀಅ್ ಎಂಬ ಸ್ಥಳದಲ್ಲಿ ವಿಶಾಲ ಸ್ಥಳದಲ್ಲಿ ಹುಲ್ಲು ಮತ್ತು ಹಲವು ಬಾವಿಗಳನ್ನು ಕಂಡರು. ಅಲ್ಲಿನ ನೀರು ಸಹ ಒಳ್ಳೆಯದಾಗಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಿನ ಬಾವಿಗಳ ನೀರಿನ ಬಗ್ಗೆ ವಿಚಾರಿಸಿದಾಗ ಅವರೊಂದಿಗೆ ಹೀಗೆ ನಿವೇದಿಸಲಾಯಿತು. ಓ ಅಲ್ಲಾಹನ ಸಂದೇಶವಾಹಕರೇ, ನೀರು ಬಹಳ ಚೆನ್ನಾಗಿದೆ. ಆದರೆ ನಾವು ಈ ಬಾವಿಗಳ ಬಗ್ಗೆ ಹೊಗಳುವಾಗ ಅವುಗಳಲ್ಲಿ ನೀರು ಕಡಿಮೆಯಾಗುತ್ತದೆ. ಬಾವಿಗಳು ಮುಚ್ಚಿ ಹೋಗುತ್ತವೆ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಹಾತಿಬ್ ಬಿನ್ ಅಬೀ ಬಲ್‌ತಅರಿಗೆ ಅಲ್ಲಿ ಒಂದು ಬಾವಿ ತೋಡಬೇಕೆಂದು ನಿರ್ದೇಶಿಸಿದರು. ಮತ್ತು ನಖೀಅ ಪ್ರದೇಶವನ್ನು ಹುಲ್ಲುಗಾವಲನ್ನಾಗಿ ಮಾಡಬೇಕೆಂದು ಹೇಳಿದರು.

ಹಝ್ರತ್ ಹಾತಿಬ್ ಬಿನ್ ಅಬೀ ಬಲ್‌ತಅರವರ ಸ್ವಭಾವ ಗುಣಗಳ ಬಗ್ಗೆ ಸೀರತುಸ್ಸಹಾಬ ಎಂಬ ಗ್ರಂಥದ ಲೇಖಕ ಬರೆಯುತ್ತಾರೆ: ಅವರು ಬಹಳ ನಿಷ್ಠಾವಂತರೂ ಔದಾರ್ಯವಂತರೂ ಆಗಿದ್ದರು. ಅವರು ಸತ್ಯವಾಗಿಯೂ ಸ್ಪಷ್ಟವಾಗಿಯೂ ಮಾತನಾಡುವವರಾಗಿದ್ದರು. ಅವರು ತಮ್ಮ ಸಂಬಂಧಿಕರ ಬಗ್ಗೆ ಮತ್ತು ಸ್ನೇಹಿತರ ಬಗ್ಗೆ ಅಪರಿಮಿತ ಕಾಳಜಿ ಹೊಂದಿದ್ದರು. ಮಕ್ಕದ ವಿಜಯದ ಮೊದಲು ಅವರು ಬರೆದ ಪತ್ರದ ಬಗ್ಗೆ ಹಿಂದೆ ವಿವರಿಸಲಾಗಿದೆ. ಅದು ಅವರಿಗೆ ತಮ್ಮ ಸಂಬಂಧಿಕರ ಬಗ್ಗೆ ಇದ್ದ ಕಾಳಜಿ ಕಾರಣದಿಂದಲೇ ಆಗಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಉತ್ತಮ ಸಂಕಲ್ಪ ಮತ್ತು ಸತ್ಯನುಡಿಯ ಕಾರಣ ಅವರಿಗೆ ಕ್ಷಮೆ ನೀಡಿದರು. ಅಲ್ಲಾಹನು ಈ ಸಹಾಬರ ವೈಶಿಷ್ಟ್ಯಗಳನ್ನು ನಾವು ಹೊಂದುವಂತೆ ಮಾಡಲಿ. ಅಲ್ಲಾಹನು ಈ ಸಹಾಬರ ಪದವಿಗಳನ್ನು ಉನ್ನತ ಗೊಳಿಸುತ್ತಾ ಇರಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. On 27-07-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon